ಶ್ರೀ ಎ. ಬಿ. ಜಕನೂರು.—ಅಧ್ಯಕ್ಷರೆ, ಈ ಪ್ರಶ್ನೆ ನನಗೆ ಸಂಬಂಧಪಡುವುದಿಲ್ಲ. ಈ ಬಗ್ಗೆ ಮೆಡಿಕಲ್ ಡಿಪಾರ್ಟ್‌ಮೆಂಟಿನವರು ಲಿಸ್ಟ್ ಕೊಡಬೇಕಾಗುತ್ತದೆ. ಪಿ. ಎಸ್. ಸಿ. ಅವರು ಭರ್ತಿ ಮಾಡಬೇಕಾಗುತ್ತದೆ.

ಶ್ರೀ ಬಿ. ಹೆಚ್. ಲಕ್ಷ್ಮಣಯ್ಯ.—ಸ್ವಾಮಿ, ತಾವು ವೈದ್ಯಕೀಯ ಪದವೀಧರರು ಇಂಜಿನಿಯರಿಂಗ್ ಪದವೀಧರರು ಎಷ್ಟು ಜನ ರಿಜಿಸ್ಟರ್ ಮಾಡಿದ್ದಾರೆ ಆ ಬಗೆ ವಿವರ ಕೊಟ್ಟಿದ್ದೀರಿ. ಈ ವರ್ಷಕ್ಕೆ ಎಷ್ಟು ಇಂಜಿನಿಯರಿಂಗ್ ಮಂತ್ರ ವೈದ್ಯಕೀಯ ಪದವೀಧರರ ಹುದ್ದೆಗಳು ಖಾಲಿ ಇವೆ ಎಂದು ತಿಳಿಸುತ್ತೀರಾ ?

ಅಧ್ಯಕ್ಷರು.—ಲೇಬರ್ ಡಿಪಾರ್ಟ್‌ಮೆಂಟ್‌ನವರು ಎಷ್ಟು ಜನ ರಿಜಿಸ್ಟರ್ ಮಾಡಿಸಿದ್ದಾರೆ ಆ ಮಾಹಿತಿಯನ್ನು ಒದಗಿಸಲಿಕ್ಕೆ ಸಾಧ್ಯ. ತಾವು ಕೇಳತಕ್ಕದ್ದು ಅವರಿಗೆ ಬರುವುದಿಲ್ಲ.

ಶ್ರೀ ಬಿ. ಹೆಚ್. ಲಕ್ಷ್ಮಣಯ್ಯ.—ಅಧ್ಯಕ್ಷರೆ, ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ನಲ್ಲಿ ಎಷ್ಟು ವೇಕೆನ್ಸಿ ಇದೆ ಎಂದು ಇರುತ್ತದೆ. ಎಷ್ಟು ಜನರ ಲಿಸ್ಟ್ ಕಳುಹಿಸಿಕೊಟ್ಟಿರುತ್ತಾರೆ ಅದು ಇರುತ್ತದೆ.

ಶ್ರೀ ಎ. ಬಿ. ಜಕನೂರು.—ಅಧ್ಯಕ್ಷರೆ, ಎಷ್ಟು ಖಾಲಿ ಹುದ್ದೆಗಳು ಇರುತ್ತವೆ. ಯಾವ ಯಾವ ಹುದ್ದೆಗಳಿಗೆ ನೇಮಸಬೇಕಾಗುತ್ತದೆ. ಅವರ ಬಗ್ಗೆ ಲಿಸ್ಟ್ ತರಿಸಿಕೊಂಡು ಅಪಾಯಿಂಟ್ ಮಾಡುವುದು ನಡೆಯುತ್ತದೆ.

ಶ್ರೀ ಜೆ. ಹೆಚ್. ಪಟೀಲ್.—ಅಧ್ಯಕ್ಷರೆ, ಒಂದು ಊರಿನಲ್ಲಿ ಒಂದು ಗಾಡಿ ತುಂಬಾ ಸಾಮಾನು ಗಳನ್ನು ಇಟ್ಟುಕೊಂಡು ದಾವಣಗೆರೆಗೆ ಹೊಡೆದುಕೊಂಡು ಹೋಗುವಾಗ, ಹಿಂದೆ ಕುಳಿತಿದ್ದವನಿಗೆ ಸಾಮಾನುಗಳು ಏನಾದರೂ ಬಿದ್ದರೆ ನೋಡಿಕೊಂಡು ಬಾ ಎಂದು ಹೇಳಿದನಂತೆ ಅವನು ಗಾಡಿ ಹೊಡೆದುಕೊಂಡು ಹೋಗುವಾಗ ಒಂದೊಂದೇ ಸಾಮಾನುಗಳು ಬಿದ್ದು ಹೋಗಲಿಕ್ಕೆ ಪ್ರಾರಂಭವಾದಾಗ ಹಿಂದೆ ಕುಳಿತಿದ್ದವನು ಅದನ್ನು ದಾವಣಗೆರೆಯವರೆಗೂ ಸುಮ್ಮನೆ ನೋಡಿಕೊಂಡು ಹೋದನಂತೆ. ದಾವಣಗೆರೆಗೆ ಹೋಗುವ ವೇಳೆಗೆ ಎಲ್ಲಾ ಸಾಮಾನುಗಳು ಬಿದ್ದು ಹೋಗಿದ್ದವಂತೆ. ಆ ಗಾಡಿ ಹೊಡೆದು ಕೊಂಡು ಹೋಗುತ್ತಿದ್ದವನು ಹಿಂದೆ ಕುಳಿತಿದ್ದವನನ್ನು ಸಾಮಾನುಗಳೆಲ್ಲಾ ಎಲ್ಲಿ ಎಂದು ಕೇಳಿದ್ದಕ್ಕೆ, ನೀನು ಸಾಮಾನುಗಳು ಬಿದ್ದರೆ ನೋಡಿಕೊಂಡು ಬಾ ಎಂದು ಏನು ಹೇಳಿದ್ದೆ, ಅದೇ ರೀತಿ ನೋಡಿ ಕೊಂಡೂ ಬಂದೆ ಎಂದು ಹೇಳಿದನಂತೆ. ಆ ರೀತಿ ಇದೆ ಇವರ ಪ್ರಶ್ನೆ ಉತ್ತರ.

MR. SPEAKER.—Questions are over.

QUESTIONS FOR ANSWERS ON THE DAY
(but not taken up)

Security measures to the Chembu Villagers of Madakeri Taluk.

413. SRI K. RAMBHAT (Puttur).—Will the Chief Minister be pleased to state:—

(a) whether it has come to the notice of Government that it has become very difficult for the people to live due to the harassment by miscreants in Chembu Village, Madikeri taluk of Coorg district ;

(b) if so, the action taken by Government in this regard ?

SRI R. GUNDU RAO (Chief Minister).—

(a) No

(b) Does not arise in view of the reply given to (a) above.